[redacted]



# ಚುನಾವಣೆ ಪ್ರಕ್ರಿಯೆಯಲ್ಲಿ ಮಾಧ್ಯಮಗಳ ಪಾತ್ರ ಬಹುಮುಖ್ಯ-ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ



ಬಳ್ಳಾರಿ,ಮಾ.29.ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಡೆಯುವ ಚುನಾವಣೆಗಳಲ್ಲಿ ಮಾಧ್ಯಮಗಳ ಭಾಗವಹಿಸುವಿಕೆ ಬಹುಮುಖ್ಯ ಪಾತ್ರವಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದರು.

ಅವರು, ಇಂದು ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ (ಹಳೆಯ) ಸಭಾಂಗಣದಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಮಾಧ್ಯಮ ಪ್ರಮಾಣೀಕರಣ ಮತ್ತು ನಿಗಾ ಸಮಿತಿಯ ಕಾರ್ಯ ವಿಧಾನಗಳು (ಎಂಸಿಎಂಸಿ) ಹಾಗೂ ಕಾಸಿಗಾಗಿ ಸುದ್ದಿ (ಪೇಯ್ಡ್ ನ್ಯೂಸ್) ಕುರಿತಾಗಿ ಮಾಧ್ಯಮ ಪ್ರತಿನಿಧಿಗಳಿಗೆ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಈಗಾಗಲೇ ಲೋಕಸಭಾ ಸಾರ್ವತ್ರಿಕ ಚುನಾವಣೆ–2024 ಘೋಷಣೆಯಾಗಿದ್ದು, ಜಿಲ್ಲೆಯಲ್ಲಿ ಮೇ 7 ರಂದು ಮತದಾನ ನಡೆಯಲಿದೆ.

ಚುನಾವಣೆ ಸಂದರ್ಭದಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದ್ದು, ಮಾಧ್ಯಮಗಳು ಮತದಾರರಿಗೆ ಚುನಾವಣೆಯ ಕುರಿತು ಉಪಯುಕ್ತ ಮಾಹಿತಿ ನೀಡುವುದರ ಜೊತೆಗೆ ಮತದಾನದ ಪ್ರಾಮುಖ್ಯತೆಯನ್ನು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

ಚುನಾವಣೆಯ ಸಂದರ್ಭದಲ್ಲಿ ಮಾಧ್ಯಮಗಳು ವಸ್ತುನಿಷ್ಠ ಸುದ್ದಿಗಳಿಗೆ ಆದ್ಯತೆ ನೀಡಬೇಕು. ಟಿವಿ, ಕೇಬಲ್, ಪತ್ರಿಕೆಗಳಲ್ಲಿ ಭಿತ್ತರಗೊಳ್ಳುವ ರಾಜಕೀಯ ಜಾಹೀರಾತುಗಳಿಗೆ ಮಾಧ್ಯಮ ಪ್ರಮಾಣೀಕರಣ ಮತ್ತು ನಿಗಾ ಸಮಿತಿ (ಎಂಸಿಎಂಸಿ) ಯಿಂದ ಪೂರ್ವಾನುಮತಿ ಕಡ್ಡಾಯವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರಗೊಳ್ಳುವ ರಾಜಕೀಯ ಪಕ್ಷ, ವ್ಯಕ್ತಿಗಳ ಜಾಹೀರಾತುಗಳ ಮೇಲೂ ಎಂಸಿಎಂಸಿ ಸಮಿತಿಯು ನಿಗಾವಹಿಸಿದ್ದು, ಇವುಗಳಿಗೆ ಸಹ ಅನುಮತಿ ಪಡೆದುಕೊಳ್ಳಬೇಕು ಎಂದು ಅವರು ತಿಳಿಸಿದರು.

ಜಿಲ್ಲಾ ಸ್ವೀಪ್ ನೋಡೆಲ್ ಅಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಮಾಧ್ಯಮವನ್ನು ನಾಲ್ಕನೇ ಅಂಗವೆಂದುಪರಿಗಣಿಸಲಾಗುತ್ತದೆ. ಚುನಾವಣೆಯನ್ನು ವಿಶ್ವಾಸಾರ್ಹತೆ ಹಾಗೂ ಪಾರದರ್ಶಕತೆಯ ಪರಿಮಿತಿಯಲ್ಲಿ ನಡೆಸುವಲ್ಲಿ ಚುನಾವಣಾ ಮಾದರಿ ನೀತಿ ಸಂಹಿತೆ (ಎಂಸಿಸಿ) ಸಹ ಮುಖ್ಯ ಪಾತ್ರವಹಿಸುತ್ತದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಶೇಕಡವಾರು ಮತದಾನ ಪ್ರಮಾಣ ಹೆಚ್ಚಿಸಲು ಜಿಲ್ಲಾ ಸ್ವೀಪ್ ಸಮಿತಿಯಿಂದ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಈ ಸಂಬಂಧ ಸ್ವೀಪ್ ಚಟುವಟಿಕೆ ಕಾರ್ಯಕ್ರಮಗಳಿಗೆ ಹೆಚ್ಚು ಪ್ರಚಾರ ನೀಡಬೇಕು ಅವರು ಕೋರಿದರು.

ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಅವರು ಮಾತನಾಡಿ, ಚುನಾವಣೆ ಮಾದರಿ ನೀತಿ ಸಂಹಿತೆ ಸಂದರ್ಭದಲ್ಲಿ ಮುದ್ರಣ ಮಾಧ್ಯಮಗಳಲ್ಲಿ ರಾಜಕೀಯ ಜಾಹೀರಾತು ಪ್ರಕಟಗೊಂಡಿದ್ದಲ್ಲಿ ಅದು ರಾಜಕೀಯ ಪಕ್ಷ ಅಥವಾ ಅಭ್ಯರ್ಥಿಯ ಅನುಮತಿ ಇದೆಯೇ ಎಂಬುದನ್ನು ವಿಚಾರಣೆ ನಡೆಸಲಾಗುತ್ತದೆ. ಇಲ್ಲದಿದ್ದರೆ, ಆ ಮಾಧ್ಯಮದ ಮೇಲೆ ಐಪಿಸಿ ಸೆಕ್ಷನ್ 171ಹೆಚ್ ಉಲ್ಲಂಘನೆಯಾಗಿದೆ ಎಂದು ಪರಿಗಣಿಸಲಾಗುತ್ತದೆ ಎಂದು ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ತುಕಾರಾಂ ರಾವ್ ಬಿ.ವಿ ಅವರು ಮಾಧ್ಯಮ ಪ್ರಮಾಣೀಕರಣ ಮತ್ತು ನಿಗಾ ಸಮಿತಿಯ ಕಾರ್ಯ ವಿಧಾನಗಳು (ಎಂಸಿಎಂಸಿ) ಹಾಗೂ ಕಾಸಿಗಾಗಿ ಸುದ್ದಿ (ಪೇಯ್ಡ್ ನ್ಯೂಸ್) ಕುರಿತಾಗಿ ಕಾರ್ಯಗಾರದಲ್ಲಿ ವಿಶ್ಲೇಷಿಸಿ ಮಾತನಾಡಿ, ಮಾಧ್ಯಮ ಪ್ರಮಾಣೀಕರಣ ಮೇಲುಸ್ತುವಾರಿ ಸಮಿತಿಯಲ್ಲಿ (ಎಂಸಿಎಂಸಿ) ಟಿವಿ, ಚಾನೆಲ್, ಸಾಮಾಜಿಕ ಜಾಲತಾಣಗಳಲ್ಲಿ ಬರುವ ಜಾಹೀರಾತನ್ನು ಪ್ರಮಾಣಿಸಿ ಪ್ರಸಾರಕ್ಕೆ ಅನುಮತಿ ನೀಡಲಾಗುತ್ತದೆ ಎಂದು ಹೇಳಿದರು.

ಕಾಸಿಗಾಗಿ ಸುದ್ದಿ (ಕಚುಜ ಓಜಕ್ಷಿ) ಮೇಲೂ ಎಂಸಿಎಂಸಿ ಸಮಿತಿಯು ನಿಗಾವಹಿಸಿದ್ದು, ಇವು ವರದಿಯಾದರೆ ಜಿಲ್ಲಾ ಚುನಾವಣಾಧಿಕಾರಿಗಳು ಸಂಬಂಧಿಸಿದ ಅಭ್ಯರ್ಥಿಗಳಿಗೆ ನೋಟೀಸ್ ಜಾರಿ ಮಾಡುತ್ತಾರೆ ಎಂದು ತಿಳಿಸಿದರು.

ಚುನಾವಣೆಗೆ ಮುದ್ರಣಗೊಳ್ಳುವ ಕರಪತ್ರ, ಕಾಸಿಗಾಗಿ ಸುದ್ದಿ, ಸುಳ್ಳುಸುದ್ದಿ, ಜಾತಿ ಕೋಮುವಾದ ಪ್ರಚೋದಿಸುವ ಇತ್ಯಾದಿ ಸುದ್ದಿಗಳ ಮೇಲೆ ಎಂಸಿಎಂಸಿ ಸಮಿತಿಯು ಹದ್ದಿನ ಕಣ್ಣಿಟ್ಟಿದೆ. ಇದನ್ನು ಹಬ್ಬಿಸುವುದು ಕೂಡ ಕಾನೂನು ಬಾಹಿರ ಎಂದು ಪರಿಗಣಿಸಲಾಗುತ್ತದೆ ಎಂದರು.ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಿಬ್ಬಂದಿಗಳು, ಮಾಧ್ಯಮ ಪ್ರತಿನಿಧಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಶ್ರದ್ಧಾ ಭಕ್ತಿಯಿಂದ ಗುಡ್ ಫ್ರೈಡೇ ಆಚರಣೆ



ಸಂಡೂರು : ಪಟ್ಟಣದ ಕ್ರಿಸ್ತಜ್ಯೋತಿ ಚರ್ಚ್‌ನಲ್ಲಿ ಶುಕ್ರವಾರ ಗುಡ್ ಫ್ರೈಡೇ ದಿನವನ್ನು ಕ್ರೈಸ್ತರು ಶ್ರದ್ಧಾಭಕ್ತಿಯಿಂದ ಆಚರಿಸಿದರು. ಯೇಸುಕ್ರಿಸ್ತರನ್ನು ಶಿಲುಬೆಗೆ ಏರಿಸಿದ ದಿನದ ಸ್ಮರಣೆಗಾಗಿ ಗುಡ್‌ಫ್ರೈಡೆ ದಿನವನ್ನು ಆಚರಿಸಲಾಗುತ್ತಿದೆ. ಈ ದಿನದಂದು ಕ್ರೈಸ್ತರು ಉಪವಾಸವಿದ್ದು, ಶ್ರದ್ಧಾಭಕ್ತಿಯಿಂದ ಯೇಸುಕ್ರಿಸ್ತರಿಗೆ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ.

ಯೇಸುಕ್ರಿಸ್ತರನ್ನು ಶಿಲುಬೆಗೆ ಏರಿಸುವ ಸಂದರ್ಭದಲ್ಲಿ ನಡೆದ ಘಟನೆಗಳ ಸ್ಮರಣೆಗಾಗಿ ಚರ್ಚ್ ನ ಆವರಣದಲ್ಲಿನ 14 ಸ್ಥಳಗಳಲ್ಲಿ ಶಿಲುಬೆಯನ್ನು ಹೊತ್ತು ವಿಶೇಷವಾಗಿ ಪ್ರಾರ್ಥಿಸಲಾಯಿತು.

ಚರ್ಚ್ ನ ಫಾದರ್ ವಸಂತಕುಮಾರ್ ಅವರು ವಿಶೇಷ ಪ್ರಾರ್ಥನೆ ಹಾಗೂ ಪೂಜಾ ವಿಧಿಗಳನ್ನು ನೆರವೇರಿಸಿ, ಆಶೀರ್ವದಿಸಿದರು. ಕೃಪಾನಲಯ ಕಾನ್ವೆಂಟಿನ ಸಿಸ್ಟರ್ ಸಿಸಿಲಿ ಫೆಲಿಕ್ಸ್, ಸಿಸ್ಟರ್ ರೀಟಾ, ಸಿಸ್ಟರ್ ಶೆರ್ಲಿ, ಸಿಸ್ಟರ್ ದೀಪ್ತಿ ಥಾಮಸ್, ಸಿಸ್ಟರ್ ಸಹನಾ, ಕ್ರಿಶ್ಚಿಯನ್ ಧರ್ಮದ ಹಲವು ಮುಖಂಡರು, ಸದಸ್ಯರು ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು.

# ಗುಲಗಂಜಿಕೊಪ್ಪದಲ್ಲಿ ಮತದಾನ ಜಾಗೃತಿ



ಧಾರವಾಡ ಮಾರ್ಚ್.: ಕಳೆದ 2019 ರ ಲೋಕಸಭಾ ಚುನಾವಣೆಯಲ್ಲಿ ಅತೀ ಕಡಿಮೆ ಮತದಾನವಾಗಿರುವ ಗುಲಗಂಜಿಕೊಪ್ಪದ ಎರಡು ಮತ ಕೇಂದ್ರಗಳ ವ್ಯಾಪ್ತಿಯ ಮತದಾರರಲ್ಲಿ ತಪ್ಪದೇ ಮತ ಚಲಾತಯಿಸುವಂತೆ ಜಿಲ್ಲಾ ಸ್ವೀಪ್ ಸಮಿತಿಯ ನೋಡಲ್ ಅಧಿಕಾರಿ ಸ್ವರೂಪ ಟಿ.ಕೆ ಅವರು ಕರೆ ನಡಿದರು.ಭಾರತದ ಸಂವಿಧಾನವು ರಾಷ್ಟ್ರದ ನಾಗರಿಕರಿಗೆ ನೀಡಿರುವ ಅಮೂಲ್ಯವಾದ ಹಕ್ಕು ಮತದಾನವಾಗಿದೆ. ಮತ್ತು ತಪ್ಪದೇ ಮತದಾನ ಮಾಡುವುದು ಪ್ರತಿಯೊಬ್ಬ ವಯಸ್ಕ ಪ್ರಜೆಯ ಕರ್ತವ್ಯವು ಆಗಿದೆ. ಆದ್ದರಿಂದ ಅರ್ಹ ಪ್ರತಿಯೊಬ್ಬರು ಬರುವ ಮೇ 7 ರಂದು ತಪ್ಪದೇ ಮತದಾನ ಮಾಡುವಂತೆ ಅವರು ಕರೆ ನೀಡಿದರು.

ಸರಕಾರಿ ಮಾದರಿ ಕನ್ನಡ ಶಾಲೆಯ ಹತ್ತಿರ ಮಾನವ ಸವಅಪಳಿ ನಿರ್ಮಿಸಿ ಮತದಾನದ ಘೋಷಣೆಗಳನ್ನು ಕೂಗುವ ಮೂಲಕ ಮಾಳಾಪೂರ ಬಸ್ ನಿಲ್ದಾಣದಲ್ಲಿ ಎಲ್ಲರೂ ಸೇರಿ ಮತದಾನ ಪ್ರತಿಜ್ಞಾ ವಿದಿ ಭೋದಿಸಿ, ಮನೆ ಮನೆಗೆ ತೆರಳಿ ಮತದಾನದ ಬಗ್ಗೆ ಜಾಗೃತಿ ಮೂಡಿಸಿದರು ನಂತರ ಎಲ್ಲ ಬೂತಿನ ಮತಗಟ್ಟೆಗಳನ್ನು ಪರಿಶೀಲಿಸಿ ಮತದಾನ ಜಾಗೃತಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಎಲ್ಲರೂ ಕಡ್ಡಾಯವಾಗಿ ಮತ ಚಲಾಯಿಸಲು ಹಾಗೂ ಮೇ 7, 2024 ರಂದು ತಪ್ಪದೆ ಮತದಾನ ಮಾಡುವಂತೆ ಸಾರ್ವಜನಕರಿಗೆ ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು, ಆರೋಗ್ಯಾಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಹಾಯಕ ನಿರ್ದೇಶಕರು (ಗ್ರಾ.ಉ) ತಾ.ಪಂ ಧಾರವಾಡ, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು, ಬಿ.ಎಲ್.ಓಗಳು, ತಾಲೂಕ ಪಂಚಾಯತಿಯ ಎಲ್ಲ ಅಧಿಕಾರಿ, ಸಿಬ್ಬಂದಿ ವರ್ಗದವರು ಉಪಸ್ಥಿತಿಯಿದ್ದರು.ಕಾರ್ಯಕ್ರಮದಲ್ಲಿ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು, ಆರೋಗ್ಯಾಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಹಾಯಕ ನಿರ್ದೇಶಕರು (ಗ್ರಾ.ಉ) ತಾ.ಪಂ ಧಾರವಾಡ, ಆಶಾ ಕಾರ್ಯಕರ್ತರು, ಅಂಗನ ವಾಡಿ ಕಾರ್ಯಕರ್ತರು, ಬಿ.ಎಲ್.ಓಗಳು, ತಾಲೂಕ ಪಂಚಾಯತಿಯ ಎಲ್ಲ ಅಧಿಕಾರಿ, ಸಿಬ್ಬಂದಿ ವರ್ಗದವರು ಉಪಸ್ಥಿತಿಯಿದ್ದರು.

# ಶಿವಪ್ಪ ಗುರಪ್ಪ ಬಳಿಗಾರ ನಿಧನ



ಯರಗಟ್ಟಿ:ಸಮೀಪದ ಸತ್ತಿಗೇರಿ ಗ್ರಾಮದ ನಿವಾಸಿ ವೀರಶೈವ ಲಿಂಗಾಯತ ಸಮಾಜದ ಹಿರಿಯ ಚೇತನ ಶ್ರೀ ಶಿವಪ್ಪ ಗುರಪ್ಪ ಬಳಿಗಾರ(88) ಇವರು ಕೈಲಾಸವಾಸಿಯಾದರೆಂದು ತಿಳಿಸಲು ವಿಷಾದವೆನಿಸುತ್ತದೆ ಮೃತರು ಇಬ್ಬರು ಪುತ್ರರು, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಎಲ್.ಐ.ಸಿ. ನಾಟಕೋತ್ಸವದಲ್ಲಿ ಝುಕೀರ ನದಾಫ ನಿರ್ದೇಶನದ 'ಬಾಸಿಂಗ ಬಲ' ನಾಟಕ ಪ್ರದರ್ಶನ




ಬೆಳಗಾವಿ 28– ವಿಶ್ವರಂಗಭೂಮಿ ದಿನಾಚರಣೆ ನಿಮಿತ್ತ ನಗರದ ರಂಗಸಂಪದದವರು ಭಾರತೀಯ ಜೀವ ವಿಮಾ ನಗಮ ಸಹಯೋಗದಲ್ಲಿ ಇದೇ ದಿ. 27 ಬುಧವಾರದಿಂದ ದಿ.27 ಶುಕ್ರವಾರದವರೆಗೆ ಮೂರು ದಿನಗಳ 'ಎಲ್.ಐ.ಸಿ. ನಾಟಕೋತ್ಸವ ಮತ್ತು ರಂಗಸಖ ಪ್ರಶಸ್ತಿ ಪ್ರದಾನ ಸಮಾರಂಭ'ವನ್ನು ಕೋನವಾಳ ಬೀದಿಯಲ್ಲಿರುವ ಲೋಕಮಾನ್ಯ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದರು ಎರಡನೇ ದಿನವಾದ ದಿ. 28 ಗುರುವಾರದಂದು ಸವದತ್ತಿಯ ರಂಗ ಆರಾಧನಾ ಸಾಂಸ್ಕೃತಿಕ ಸಂಘಟನೆಯವರಿಂದ ಶ್ರೀನವಾಸ ವೈದ್ಯ ರಚನೆಯ 'ಬಾಸಿಂಗ ಬಲ' ನಾಟಕ ಪ್ರದರ್ಶನಗೊಂಡಿತು. ನಾಟಕದ ರಂಗರೂಪ, ನಿರ್ದೇಶನ ಝುಕೀರ ನದಾಫ ಅವರದ್ದಾಗಿತ್ತು.

ರಂಗಸಂಪದ ಗೌರವಾಧ್ಯಕ್ಷರಾದ ಶ್ರೀಪತಿ ಮಂಜನಬೈಲು, ಅವರು, ಮನಸ್ಸಿನಲ್ಲಿ ಮೂಡುವ ಪ್ರಶ್ನೆಗಳನ್ನು ಹೊರಹಾಕಿಕೊಳ್ಳುವವ ಮಾತ್ರ ಉತ್ತಮ ಕಲಾವಿದನಾಗಿ ಹೊರಹೊಮ್ಮಲು ಸಾಧ್ಯ. ಇಂದಿನ ನಾಟಕದ ನಿರ್ದೇಶಕ ಝುಕೀರ ನದಾಫ ರಂಗಸಂಪದದಿಂದ ಹೊರಬಂದ ಅದ್ಭುತ ಪ್ರತಿಭೆ. ಪ್ರಶ್ನೆಗಳನ್ನು ಕೇಳುವ ಸ್ವಭಾವ ಇವರದಾಗಿತ್ತು. ಅಂದು ಪ್ರಶ್ನೆಗಳನ್ನು ಕೇಳುವ ಅವರ ಮನೋಧರ್ಮವೇ ಇಂದು ಇವರನ್ನು ಇಷ್ಟು ಎತ್ತರಕ್ಕೆ ಬೆಳೆಸಿದೆ ಎಂದರೆ ತಪ್ಪಾಗಲಾರದು ಎಂದ ಅವರು ಈ ನಾಟಕದಲ್ಲಿ ವೃತ್ತಿ ರಂಗಭೂಮಿಯ ಛಾಯಿದೆ ಇಲ್ಲಿಯ ಹಾಡುಗಳು ನನಗೆ ತುಂಬ ಇಷ್ಟವಾದವು ಎಂದು ಹೇಳಿದರು.ಕಿತ್ತೂರ ಬಸ್ ಸ್ಟ್ಯಾಂಡದಿಂದ ಪ್ರಾರಂಭವಾಗುವ ಈ ನಾಟಕದ ಕತೆ ಯರಗಟ್ಟಿ ಊರಿಗೆ ಹೋಗಿ ತಲುಪುತ್ತದೆ. ಒಬ್ಬ ವಿದುರ  ವಿದವೆಯೇ ಇಲ್ಲಿಯ ನಾಯಕ ನಾಯಕಿಯರು. ಇಂಪಾದ ಹಾಡುಗಳು ಅಲ್ಲದೇ ಹಾಡಿಗೆ ತಕ್ಕಂತೆ ನೃತ್ಯ ಎಲ್ಲರ ಗಮನ ಸೆಳೆಯುತ್ತದೆ.

ಅಧ್ಯಕ್ಷ ಡಾ. ಅರವಿಂದ ಕುಲಕರ್ಣಿ, ಬಾಸಿಂಗ ಬಲ ಲೇಖನ ಬರೆದವರು ಶ್ರೀನವಾಸ ವೈದ್ಯ ಅವರು. ನಾಟಕ ರೂಪಾಂತರ ಝುಕೀರ ನದಾಫ ಅವರದ್ದಾಗಿದೆ. ಲೇಖಕನ ಬರಹಗಳನ್ನು ಮನೆ ಮನಗಳನ್ನು ತಲುಪಿಸುವ ಕೆಲಸವನ್ನು ನಾಟಕ ತಂಡ ಮಾಡುತ್ತದೆ. ನಿರ್ದೇಶಕ ನದಾಫ ಅವರು ಆ ಕೆಲಸ ಮಾಡಿದ್ದಾರೆ ಇದೊಂದು ಒಳ್ಳೆಯ ಪ್ರಯತ್ನ. ಇಂತಹ ಬೇರೆ ಬೇರೆ ಲೇಖಕರ ಬರೆಹಗಳು ನಾಟಕಕ್ಕೆ ರೂಪಾಂತರಗೊಳ್ಳಲಿ ಎಂದು ಹೇಳಿದರು.ಇದೇ ಸಂದರ್ಭದಲ್ಲಿ "ಪರಿಮಳದವರು" ನಾಟಕಕ್ಕೆ ಕಾಣಿಕೆ ನೀಡದ ಶ್ರೀಮತಿ ವೀಣಾ ಹೆಗಡೆ, ಅಶೋಕ ಎಮ್. ಕುಲಕರ್ಣಿ, ವಾಮನ ಮಳಗಿ, ಅನಂತ ಸಂಗೋರಾಮ, ಶೀಮತಿ ಶೀತಲ ರಾಜಪುರೋಹಿತ, ಶ್ರೀಮತಿ ಪೂಜಾ ಕಾರಜೋಳ, ದಿಲೀಪ ಮಳಗಿ, ಶ್ರೀಮತಿ ಶೋಭಾ ಶ್ರೀಪತಿ ಮಂಜನಬೈಲು, ಮಧುಕರ ಗುಂಡೇನಟ್ಟಿ ಮುಂತಾದವರನ್ನು ಶಾಲು ಹೊದಿಸಿ ರಾಯರ ಪ್ರಸಾದವನ್ನು ನೀಡಿ ವ್ಯಾಸಾಚಾರ್ಯ ಅಂಬೇಕರ ಗೌರವಿಸಿದರು.

# ಇಂದು ಕೊರಲಗುಂದಿ ಜೋಡು ರಥೋತ್ಸವ- ಕೊರಲಗುಂದಿ ವಿ.ದೊಡ್ಡಕೇಶವ ರೆಡ್ಡಿ



ಬಳ್ಳಾರಿ,ಮಾ.29. ತಾಲೂಕಿನ ಕೊರಲಗುಂದಿ ಗ್ರಾಮದ ಆರಾಧ್ಯ ದೈವಗಳಾದ ಶ್ರೀ ಅಡಿವಿ ತಾತ ಹಾಗೂ ಶ್ರೀ ಹಾಲುಬಸವೇಶ್ವರ ಸ್ವಾಮಿಯ ಜೋಡು ರಥೋತ್ಸವವು ಪ್ರತಿವರ್ಷದಂತೆ ಈ ವರ್ಷವೂ ಸಹ ವಿಜ್ರಂಭಣೆಯಿಂದ ಇಂದು ಸಂಜೆ 5 ಗಂಟೆಗೆ ಜರುಗಲಿದೆ ಎಂದು ಪಿ ಎಲ್ ಡಿ ಬ್ಯಾಂಕ್‌ನ ಅಧ್ಯಕ್ಷರು ಹಾಗೂ ಹಿರಿಯ ಧುರೀಣರಾದ ಕೊರಲಗುಂದಿ ವಿ. ದೊಡ್ಡಕೇಶವ ರೆಡ್ಡಿರವರು ತಿಳಿಸಿದ್ದಾರೆ.


ಈ ಕುರಿತಂತೆ ಪತ್ರಿಕಾ ಪ್ರಕಟಣೆ ನೀಡಿರುವ ಕೊರಲಗುಂದಿ ವಿ. ದೊಡ್ಡಕೇಶವ ರೆಡ್ಡಿಅವರು ಈ ರಥೋತ್ಸವದ ಅಂಗವಾಗಿ ನಾಳೆ ರಾತ್ರಿ 8 ಗಂಟೆಗೆ ಹಾಸ್ಯಮಯ ಬೈಲು ನಾಟಕ ಶಶಿರೇಖಾ ಪರಿಣಯ ಅರ್ಥಾತ್ ಬಲರಾಮನ ಗರ್ವಭಂಗ ನಾಟಕ ಪ್ರದರ್ಶನ ನಡೆಯಲಿದೆ

ಆದ್ದರಿಂದ ಎಲ್ಲಾ ಕಲಾಭಿಮಾನಿಗಳು ಸಹ ಇದರಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ಕೊರಲಗುಂದಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ವಿ ರಾಘವ ರೆಡ್ಡಿ, ಪ್ರದೀಪ್ ರೆಡ್ಡಿ, ಹಾಗೂ ಗ್ರಾಮ ಪಂಚಾಯತಿಯ ಸರ್ವ ಸದಸ್ಯರು ಮತ್ತು ಗ್ರಾಮದ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಭಕ್ತಾದಿಗಳು, ಗ್ರಾಮದ ಪ್ರಮುಖರಾದ ಕಟ್ಟೆ ರಾಮರೆಡ್ಡಿ, ವಿ. ರಮಣ ರೆಡ್ಡಿ, ಇಮಾಂತ ರೆಡ್ಡಿ, ವಿ. ನಾಗರೆಡ್ಡಿ, ಎಚ್ ಶ್ರೀನಿವಾಸ ರೆಡ್ಡಿ, ವಿ ಗುರುಪಾದ ರೆಡ್ಡಿ, ಬಸ್ಯಾ ನಾಯಕ, ಶಿವಕುಮಾರು ಮತ್ತಿತ್ತರರು ಮನವಿ ಮಾಡಿದ್ದಾರೆ.

# ಮತದಾನ ಮಾಡಿದವನೇ ಮಹಾ ಶೂರ ಪ್ರಜಾಪ್ರಭುತ್ವದಲ್ಲಿ ಮತದಾನದ ಪ್ರಾಮುಖ್ಯತೆ

ಗ್ರೀಕ್ ರಾಜನೀತಿಜ್ಞ ಪೆರಿಕಲ್ಸ್ ಹೇಳಿದಂತೆ ಎಣಾಣ ಛಜಛಿಚಿಣಾಜ ಥಿಠಾ ಜಠಟ'ಣ ಣಚಿಞಜ ಬಟಣಜಡಿಜಣ ಬಟ ಠಿಠಟುಣುಛಿ ಜಠಛಿಟ'ಣ ಟಜಚಿಟ ಣುಚಿಣ ಠಿಠಟುಣುಛಿ ತಿಠಟ'ಣ ಣಚಿಞಜ ಚಿಟ ಬಟಣಜಡಿಜಣ ಬಟ ಥಿಠಾ' ಅಂದರೆ ನೀವು ರಾಜಕೀಯದಲ್ಲಿ ಆಸಕ್ತಿ ವಹಿಸದ ಕಾರಣ ರಾಜಕೀಯವು ನಮ್ಮ ಬಗ್ಗೆ ಆಸಕ್ತಿ ವಹಿಸುವುದಿಲ್ಲ ಎಂದು ಅರ್ಥವಲ್ಲ

ನಾವು ದಿನನಿತ್ಯ ನಮ್ಮ ಸ್ನೇಹಿತರು, ಕುಟುಂಬ,ಸೇರಿದಂತೆ ಸಹೋದ್ಯೋಗಿಗಳೊಂದಿಗೆ ಮಾತನಾಡುವಾಗ ನಮ್ಮ ದೇಶದಲ್ಲಿ ಶಿಕ್ಷಣ ವ್ಯವಸ್ಥೆ,ಆರ್ಥಿಕತೆ,ಜಿ ಡಿ ಪಿ ,ಸೇರಿದಂತೆ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಸರಿಯಿಲ್ಲ ಎನ್ನುವುದು ಸರ್ವೇಸಾಮಾನ್ಯ ಆದರೆ ಈ ಎಲ್ಲಾ ಕ್ಷೇತ್ರಗಳನ್ನು ಸರ್ಕಾರನೇ ನಿರ್ವಹಿಸುವುದರಿಂದ ಸರ್ಕಾರ ತೆಗೆದುಕೊಳ್ಳುವ ನಿರ್ಧಾರ ನೇರವಾಗಿ ನಮ್ಮ ಮೇಲೆ ಪರಿಣಾಮ ಬೀರುತ್ತವೆ.ಹಾಗಾಗಿ ನಮ್ಮಿಂದ ವ್ಯವಸ್ಥೆಗೆ ಪರಿಣಾಮ ಬೀಳಬೇಕೆಂದರೆ ಅದು ಕೇವಲ ನಾವು 5 ವರ್ಷಕೊಮ್ಮೆ ಚಲಾಯಿಸುವ ಮತದಾನದ ಮೂಲಕ ಮಾತ್ರ ಸಾಧ್ಯ.




ಮತದಾರನ ಪಾತ್ರವು ಪ್ರಜಾತಂತ್ರದ ಸಿದ್ಧಾಂತದಲ್ಲಿ ಅತ್ಯಂತ ಮುಖ್ಯವಾದ ಮೂಲಭೂತ ಅಂಗ. ಮತದಾನ ಪ್ರಕ್ರಿಯೆ ಪ್ರಜಾತಂತ್ರದ ಆಧಾರದ ಮೇಲೆ ನಿಂತಿದ್ದು, ನಾಗರಿಕರು ತಮ್ಮ ಜನಪ್ರತಿನಿಧಿಗಳನ್ನು ಆರಿಸಲು ಅವರಿಗೆ ಹಕ್ಕು ನೀಡುತ್ತದೆ.

ಈ ಪ್ರಕ್ರಿಯೆಯ ಮೂಲಕ ಜನಸಾಮಾನ್ಯರು ತಮ್ಮ ನೇತಾರನ್ನು ಆರಿಸುವ ಅಧಿಕಾರವನ್ನು ಹೊಂದುತ್ತಾರೆ. ಇದು ಒಂದು ಸಮಾನ ಹಕ್ಕು,ಮತದಾನದ ಮೂಲಕ ನಾಗರಿಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯವಿದ್ದು, ಇದು ಸಾರ್ವಜನಕ ನ್ಯಾಯವ್ಯವಸ್ಥೆಯ ನಿರ್ಧಾರಕ್ಕೆ ಪ್ರಮುಖ ಮೂಲ.

ಹೀಗೆ ನಡೆಯುವ ಪ್ರಕ್ರಿಯೆ ದೇಶದ ನೇತೃತ್ವ ಮತ್ತು ನ್ಯಾಯವ್ಯವಸ್ಥೆಗೆ ಜನರ ಸಮ್ಮತಿಯನ್ನು ಸಾರ್ವಜನಕವಾಗಿ ಹೊಂದಿಸುತ್ತದೆ. ಇದರ ಫಲಿತಾಂಶವಾಗಿ ದೇಶದ ಸಾರ್ವಜನಕ ನಾಗರಿಕತೆ ಮತ್ತು ನೀತಿಯ ಸ್ಥಿತಿ ಹೆಚ್ಚುತ್ತದೆ.

ಮತದಾರನ ಪಾತ್ರವು ಒಂದು ಪ್ರಜಾತಂತ್ರದಲ್ಲಿ ಹೆಚ್ಚಾದ ಮಹತ್ವದಿಂದಾಗಿದೆ. ಮತದಾನ ಪ್ರಕ್ರಿಯೆ ದೇಶದ ನ್ಯಾಯವ್ಯವಸ್ಥೆಯ ನಿರ್ಧಾರಕ್ಕೆ ಹಾಗೂ ನೇತೃತ್ವಕ್ಕೆ ಮುಖ್ಯವಾದ ಅಂಗವಾಗಿದೆ. ಇದು ನಾಗರಿಕ ಸಮಾಜದ ಸಾಕ್ಷರತೆ, ನೈತಿಕತೆ, ಹೊಸ ಹಾಗೂ ಸಮಾಜಶಾಸ್ತ್ರದ ಅಭಿವೃದ್ಧಿಗೆ ಕೂಡ ಸಹಾಯ ಮಾಡುತ್ತದೆ.

ಮತದಾನದ ಪಾತ್ರವು ಸಮಾಜದ ಹಾಗೂ ರಾಜಕೀಯ ವ್ಯವಸ್ಥೆಯ ನಡುವೆ ಒಂದು ದೊಡ್ಡ ಸಂಬಂಧ ಉಂಟುಮಾಡುತ್ತದೆ. ಸಮಾಜದ ವಿಶೇಷಾಂಗಗಳನ್ನು ಪ್ರತಿಬಿಂಬಿಸುತ್ತದೆ ಹಾಗೂ ಪ್ರಜಾತಂತ್ರದ ಆತ್ಮಭರಣಗಳನ್ನು ನಿರ್ಮಿಸುತ್ತದೆ.

ಮತದಾನವು ಪ್ರಜಾತಂತ್ರದ ಆಧಾರವಾಗಿರುತ್ತದೆ ಏಕೆಂದರೆ ಇದು ನಾಗರಿಕರ ನಿಯಮಿತ ಸಂಪರ್ಕ ಕೂಡಿದ ವಿಚಾರ ವ್ಯಕ್ತಿತ್ವಗಳನ್ನು ರಚಿಸುತ್ತದೆ ಹಾಗೂ ಭಾಗವಹಿಸಿದವರು ನೇತೃತ್ವ ವಹಿಸುವ ನಿರೀಕ್ಷೆಯನ್ನು ಬೆಳೆಸುತ್ತದೆ.

ಮತದಾನವು ವೈವಿಧ್ಯಮಯವಾದ ಸಮಾಜದಲ್ಲಿ ಸಾಮರಸ್ಯ ಮತ್ತು ಒಗ್ಗಟ್ಟನ್ನು ಉಂಟುಮಾಡಿ, ಸಮಾಜ ಸಂಘಟನೆಯ ಮೂಲಕ ಆದ್ಯತೆ ಹೊಂದಿರುತ್ತದೆ. ಇದು ನಾಗರಿಕ ಶಿಕ್ಷಣದ ಅಂಶವಾಗಿದ್ದು, ಜನಸಾಮಾನ್ಯರನ್ನು ಸಾರ್ವಜನಕ ಸಂಬಂಧಗಳ ಸ್ಥಿತಿಗೆ ಪರಿಚಯಿಸುತ್ತದೆ ಹಾಗೂ ಅವರ ಅಭಿವೃದ್ಧಿಗೆ ಕೊಡುವ ಅವಕಾಶವಾಗಿದೆ.

ದೇಶದ ಅಭಿವೃದ್ಧಿಗಾಗಿ ಉತ್ತಮ ನಾಯಕನ ಆಯ್ಕೆ ಮಾಡುವುದು ನಮ್ಮ ಹಕ್ಕು ಮತ್ತು ಕರ್ತವ್ಯವಾಗಿದೆ ಜಿಲ್ಲೆಯಲ್ಲಿ ಮೇ07 ರಂದು ನಡೆಯುವ 2024 ರ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನದಿಂದ ದೂರ ಉಳಿಯದೇ ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೆ ಜಾಗೃತರಾಗಿ ಮತ ಚಲಾಯಿಸಿ ನೆರೆಹೊರೆಯವರನ್ನು ಮತದಾನ ಚಲಾಯಿಸಲು ಪ್ರೊ?ರೀತ್ಸಾಹಿಸಿ ಎಲ್ಲರೂ ತಪ್ಪದೇ ಮತಚಲಾಯಿಸೋಣ.

ಮತದಾನ ಬಗ್ಗೆ ಮಹನೀಯರ ಅಭಿಪ್ರಾಯ:

ಮತಪತ್ರವು ಬುಲೆಟ್ಗಿಂತ ಪ್ರಬಲವಾಗಿದೆ."  ಅಬ್ರಹಾಂ ಲಿಂಕನ್

ತಮ್ಮ ಆಯ್ಕೆಯನ್ನು ವ್ಯಕ್ತಪಡಿಸುವವರು ಬುದ್ಧಿವಂತಿಕೆಯಿಂದ ಆಯ್ಕೆ ಮಾಡಲು ಸಿದ್ಧರಾಗದ ಹೊರತು ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ. ಆದ್ದರಿಂದ ಪ್ರಜಾಪ್ರಭುತ್ವದ ನಜವಾದ ರಕ್ಷಣೆ ಶಿಕ್ಷಣವಾಗಿದೆ. ಫ್ರಾಂಕ್ಲಿನ್ ಡಿ. ರೂಸ್ವೆಲ್ಟ್

ಮತವಿಲ್ಲದ ಮನುಷ್ಯ ರಕ್ಷಣೆಯಿಲ್ಲದ ಮನುಷ್ಯ."  ಲಿಂಡನ್ ಬಿ. ಜಾನ್ಸನ್

ನಾವು ಮುಖ್ಯವಾದ ವಿಷಯಗಳ ಬಗ್ಗೆ ಮೌನವಾಗಿರುವ ದಿನ ನಮ್ಮ ಜೀವನವು ಕೊನೆಗೊಳ್ಳಲು ಪ್ರಾರಂಭಿಸುತ್ತದೆ. – –ಮಾರ್ಟಿನ್ ಲೂಥರ್ ಕಿಂಗ್, ಜೂ ಯಾವಾಗಲೂ ತತ್ವಕ್ಕಾಗಿ ಮತ ಚಲಾಯಿಸಿ, ಆದರೂ ನೀವು ಏಕಾಂಗಿಯಾಗಿ ಮತ ಚಲಾಯಿಸಬಹುದು ಮತ್ತು ನಮ್ಮ ಮತವನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ ಎಂಬ ಮಧುರವಾದ ಪ್ರತಿಬಿಂಬವನ್ನು ನೀವು ಪಾಲಿಸಬಹುದು. * ಜಾನ್ ಕ್ವಿನ್ಸಿ ಆಡಮ್ಸ್ ನಮಗೆ ಬಹುಮತದ ಸರ್ಕಾರ ಇಲ್ಲ. ಭಾಗವಹಿಸುವ ಬಹುಮತದಿಂದ ನಮ್ಮ ಸರ್ಕಾರವಿದೆ. *ಥಾಮಸ್ ಜೆಫರ್ಸನ್

ಪ್ರಜಾಪ್ರಭುತ್ವದಲ್ಲಿ ಒಬ್ಬ ಮತದಾರನ ಅಜ್ಞಾನ ಎಲ್ಲರ ಭದ್ರತೆಯನ್ನು ಕುಗ್ಗಿಸುತ್ತದೆ. – ಜಾನ್ ಎಫ್ ಕೆನಡಿ

ಮತವು ರೈಫಲ್ನಂತೆ; ಅದರ ಉಪಯುಕ್ತತೆಯು ಬಳಕೆದಾರರ ಪಾತ್ರವನ್ನು ಅವಲಂಬಿಸಿರುತ್ತದೆ." * ಥಿಯೋಡರ್ ರೂಸ್ವೆಲ್ಟ್

ವಿನಾಯಕ ಭಾವಿಮನಿ

ಅಪ್ರೆಂಟಿಸ್ , ವಾರ್ತಾ ಮತ್ತು ಸಾ.ಸಂ.ಇಲಾಖೆ,ಗದಗ